**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. 10/2025**
**ದಿನಾಂಕ: 18.06.2025**

ಫಿರ್ಯಾದುದಾರರುಃ ರಾಜ್ಯದ ಪರವಾಗಿ ಗೋಣಿಬೀಡು ಪೊಲೀಸರು.

ವಿರುದ್ಧ

ಆರೋಪಿತರುಃ ಶ್ರೀ. ಕೆ.ಎಂ. ಕುಶ,
ಬಿನ್ಃ ಲೇಟ್ಃ ಕೆ.ಎಸ್. ಮಂಜೇಗೌಡ,
40 ವರ್ಷ ವಯಸ್ಸು,
ವಾಸಃ ಕಣಚೂರು ಗ್ರಾಮ,
ಹಂತೂರು ಅಂಚೆ,
ಗೋಣಿಬೀಡು ಹೋಬಳಿ,
ಮೂಡಿಗೆರೆ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ.

**ದೋಷಾರೋಪಣೆ**

ಶ್ರೀ. ಪ್ರಕಾಶ್ ಪಿ.ಎಂ., ಎಂ.ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಮೂಡಿಗೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಮಾಡುತ್ತಿದ್ದೇನೆ.

ದಿನಾಂಕ: 08-10-2024 ರಂದು ರಾತ್ರಿ 8-15 ಗಂಟೆಯ ಸಮಯದಲ್ಲಿ ಗೋಣಿಬೀಡು ಪೊಲೀಸ್ ಠಾಣಾ ವ್ಯಾಪ್ತಿಯ ಕಣಚೂರು ಗ್ರಾಮದ ಕೆ.ಎನ್.ಉಮೇಶರವರ ಮನೆಗೆ ಹೋಗುವ ಸಾರ್ವಜನಿಕ ರಸ್ತೆಯಲ್ಲ ಆರೋಪಿಯಾದ ನಿಮಗೆ ಚಾಸಾ.1 ವಿನೋದ್ ಕೆ.ಎಸ್. ರವರು ಈ ಹಿಂದೆ ಗಣೇಶ ಹಬ್ಬದಲ್ಲಿ ಕಣಚೂರು ಗ್ರಾಮದಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡಿದ ಸ್ಥಳಕ್ಕೆ ಮದ್ಯಪಾನ ಮಾಡಿಕೊಂಡು ಬಂದಿದ್ದ ನಿಮಗೆ ಇಲ್ಲಿಗೆ ಕುಡಿದು ಬರಬೇಡ ಎಂದು ಬುದ್ದಿವಾದ ಹೇಳಿ ಜೋರು ಮಾಡಿ ಕಳುಹಿಸಿದ್ದ ವಿಚಾರವಾಗಿ ದ್ವೇಷವನ್ನು ಇಟ್ಟುಕೊಂಡು ಚಾಸಾ.1 ರವರು ಕೆ.ಎಸ್. ಉಮೇಶ್ ರವರ ಮನೆಗೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ ನಿಲ್ಲಿಸಿ ಹೋಗಿದ್ದ ಅವರ ಹೆಸರಿನಲ್ಲಿರುವ KA-05-MA-3929 ರ ನೊಂದಣಿ ಸಂಖ್ಯೆಯ ಮಾರುತಿ 800 ಕಾರಿನ ಮುಂಭಾಗದ ಗ್ಲಾಸಿನ ಮೇಲೆ 18 X 23 ಇಂಚು ಉದ್ದಗಲದ ಸುತ್ತಳತೆ ಇರುವ ಒಂದು ಕಾಡು ಜಾತಿಯ ಕಲ್ಲನ್ನು ಎತ್ತಿ ಹಾಕಿ ಮುಂಭಾಗದ ಗ್ಲಾಸನ್ನು ಒಡೆದು ನಾಶ ಮಾಡಿ ಸಾಕ್ಷಿ-01 ರವರಿಗೆ 4,750-00 ರೂ ನಷ್ಟ ಉಂಟು ಮಾಡಿರುತ್ತೀರಿ, ಆದ್ದರಿಂದ, ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ 324(2) ಮತ್ತು ಸ್ವತ್ತಿನ ನಾಷ್ಟ ಮತ್ತು ನಷ್ಠ ಪ್ರತಿಬಂಧಕ ಅದಿನಿಯಮ 1981 ರ ಕಲಂ 2(a) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆದ್ದರಿಂದ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಮೂಡಿಗೆರೆ.